Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ


भाग—IX    अनुभाग 1
PART IX    SECTION 1
ಭಾಗ IX    ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, डिसेम्बर 15, 1986 | मार्गशिर 24, 1908 (शक) | खण्ड—5 |
| No. 1 | New Delhi Monday, December 15, 1986 | Margashira 24, 1908 (Saka) | Vol. 5 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೧೫, ೧೯೮೬ | ಮಾರ್ಗಶಿರ ೨೪, ೧೯೦೮ (ಶಕ) | ಸಂಪುಟ ೫ |


## MINISTRY OF LAW AND JUSTICE

(Legislative Department)

New Delhi, October 9, 1986/Ashwayuja 17, 1908 (Saka)

The translations in Kannada of the following namely— (1) The Societies Registration Act, 1860 (2) The Local Authorities Loans Act, 1914 (3) The Commercial Documents Evidence Act, 1939 (4) The Industrial Disputes (Banking and Insurance Companies) Act, 1949 (5) The Commissions of Inquiry Act, 1952 (6) The Employment Exchanges (Compulsory Notification of Vacancies) Act, 1959–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಸೊಸೈಟಿ ನೋಂದಣಿ ಅಧಿನಿಯಮ, ೧೮೬೦ (೨) ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, ೧೯೧೪ (೩) ವಾಣಿಜ್ಯ ದಸ್ತಾವೇಜು ಸಾಕ್ಷ್ಯ ಅಧಿನಿಯಮ, ೧೯೩೯ (೪) ಔದ್ಯಮಿಕ ವಿವಾದ (ಬ್ಯಾಂಕಿಂಗ್ ಮತ್ತು ವಿಮಾ ಕಂಪನಿ) ಅಧಿನಿಯಮ, ೧೯೪೯ (೫) ವಿಚಾರಣಾ ಆಯೋಗ ಅಧಿನಿಯಮ, ೧೯೫೨ (೬) ಉದ್ಯೋಗ ವಿನಿಮಯ ಕಛೇರಿಗಳ (ಖಾಲಿ ಸ್ಥಾನಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, ೧೯೫೯.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, 1914

## (1914ರ ಸಂಖ್ಯೆ 9)

[28ನೇ ಫೆಬ್ರವರಿ, 1914.]

ಸ್ಥಳೀಯ ಪ್ರಾಧಿಕಾರಗಳಿಗೆ ಸಾಲ ನೀಡುವುದಕ್ಕೆ ಸಂಬಂಧಿಸಿದ ಕಾನೂನನ್ನು ಕ್ರೋಢೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

**ಪ್ರಸ್ತಾವನೆ.–** ಸ್ಥಳೀಯ ಪ್ರಾಧಿಕಾರಗಳ ಸಾಲ ಪಡೆಯುವ ಅಧಿಕಾರಗಳಿಗೆ ಸಂಬಂಧಪಟ್ಟ ಕಾನೂನನ್ನು ಕ್ರೋಢೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ, ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, 1914 ಎಂದು ಕರೆಯತಕ್ಕದ್ದು.

(2) ಇದು, 1956ರ ನವೆಂಬರ್ 1ಕ್ಕೆ ನಿಕಟಪೂರ್ವದಲ್ಲಿ ಬಿ ಭಾಗದ ರಾಜ್ಯಗಳಲ್ಲಿ ಒಳಗೊಂಡಿದ್ದ ರಾಜ್ಯಕ್ಷೇತ್ರಗಳನ್ನುಳಿದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ 'ಸ್ಥಳೀಯ ಪ್ರಾಧಿಕಾರ' ಎಂದರೆ, ಯಾವುದೇ ಸ್ಥಳೀಯ ಅಥವಾ ಪೌರ ನಿಧಿಯ ನಿಯಂತ್ರಣ ಅಥವಾ ನಿರ್ವಹಣೆಗೆ ಕಾನೂನುಸಮ್ಮತ ಹಕ್ಕುಳ್ಳ ಅಥವಾ ಯಾವುದೇ ಸ್ಥಳೀಯ ಪ್ರದೇಶದೊಳಗೆ ಯಾವುದೇ ಉಪಕರ, ದರ, ಸುಂಕ ಅಥವಾ ತೆರಿಗೆಯನ್ನು ವಿಧಿಸಲು ಕಾನೂನುಸಮ್ಮತ ಹಕ್ಕುಳ್ಳ ಯಾರೇ ವ್ಯಕ್ತಿ;

ಯಾವುದೇ ಸ್ಥಳೀಯ ಪ್ರಾಧಿಕಾರದ ಸಂಬಂಧದಲ್ಲಿ ಬಳಸಲಾದ "ನಿಧಿಗಳು" ಎಂಬುದು ನಿಯಂತ್ರಣ ಅಥವಾ ನಿರ್ವಹಣೆಗೆ ಕಾನೂನುಸಮ್ಮತವಾಗಿ ಹಕ್ಕು ಪಡೆದಿರುವ ಯಾವುದೇ ಸ್ಥಳೀಯ ಅಥವಾ ಪೌರ ನಿಧಿಯನ್ನು ಮತ್ತು ಅಂಥ ಪ್ರಾಧಿಕಾರವು ಕಾನೂನುಸಮ್ಮತವಾಗಿ ವಿಧಿಸಲು ಹಕ್ಕು ಪಡೆದಿರುವ ಯಾವುದೇ ಉಪಕರ, ದರ, ಸುಂಕ ಅಥವಾ ತೆರಿಗೆಯನ್ನು ಹಾಗೂ ಅಂಥ ಪ್ರಾಧಿಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತನ್ನು ಒಳಗೊಳ್ಳುತ್ತದೆ;

"ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು; ಮತ್ತು

"ಕಾಮಗಾರಿ" ಎಂಬುದು ಯಾವುದೇ ಇತರ ಕಾಮಗಾರಿಗೆ ಪ್ರಾಸಂಗಿಕವಾಗಿರಲಿ ಅಥವಾ ಇಲ್ಲದಿರಲಿ ಸಮೀಕ್ಷೆಯನ್ನು ಒಳಗೊಳ್ಳುತ್ತದೆ.

"ಸರ್ಕಾರ ಅಥವಾ "ಸಮುಚಿತ ಸರ್ಕಾರ" ಎಂದರೆ, ಕಂಟೋನ್ಮೆಂಟ್ ಪ್ರಾಧಿಕಾರಗಳ ಸಂಬಂಧದಲ್ಲಿ ಮತ್ತು ಪ್ರಮುಖ ಬಂದರುಗಳಲ್ಲಿನ ಬಂದರು ಪ್ರಾಧಿಕಾರಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರ ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳ ಸಂಬಂಧದಲ್ಲಿನ ರಾಜ್ಯ ಸರ್ಕಾರ.

**3. ಸ್ಥಳೀಯ ಪ್ರಾಧಿಕಾರಗಳ ಸಾಲ ಪಡೆಯುವ ಅಧಿಕಾರಗಳು.–** (1) ಸ್ಥಳೀಯ ಪ್ರಾಧಿಕಾರವು, ನಿಯಮಿಸಲಾದ ಷರತ್ತುಗಳಿಗೊಳಪಟ್ಟು, ಈ ಕೆಳಕಂಡ ಯಾವುದೇ ಉದ್ದೇಶಗಳಿಗಾಗಿ ಅದರ ನಿಧಿಗಳ ಅಥವಾ ಅದರ ಯಾವುದೇ ಭಾಗದ ಭದ್ರತೆಯ ಮೇಲೆ ಸಾಲ ಪಡೆಯಬಹುದು, ಎಂದರೆ:–

(i) ಅದು ಕಾರ್ಯಗತಗೊಳಿಸಲು ಕಾನೂನುಸಮ್ಮತವಾಗಿ ಅಧಿಕೃತವಾದ ಯಾವುದೇ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು;

(ii) ಪರಿಹಾರವನ್ನು ನೀಡುವುದು ಹಾಗೂ ಬರಗಾಲ ಮತ್ತು ಅಭಾವ ಕಾಲಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಸುಸ್ಥಾಪಿಸುವುದು ಹಾಗೂ ನಿರ್ವಹಿಸುವುದು;

(iii) ಯಾವುದೇ ಅಪಾಯಕಾರಿ ಸಾಂಕ್ರಾಮಿಕ ರೋಗ ತಲೆದೋರುವುದನ್ನು ಅಥವಾ ಹರಡುವುದನ್ನು ತಡೆಗಟ್ಟುವುದು;

(iv) (ii) ಮತ್ತು (iii)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಉದ್ದೇಶಗಳಿಗೆ ಸಂಬಂಧಿಸಬಹುದಾದ ಅಥವಾ ಅದಕ್ಕೆ ಸಹಾಯಕವಾಗಬಹುದಾದ ಯಾವುದೇ ಕ್ರಮಗಳು;

(v) ಕಾನೂನಿಗನುಸಾರವಾಗಿ ಹಿಂದೆ ಪಡೆದ ಸಾಲದ ಹಣವನ್ನು ಮರು ಸಂದಾಯ ಮಾಡುವುದು:

ಪರಂತು, (v)ನೇ ಖಂಡದಲ್ಲಿರುವುದಾವುದೂ, ಹಿಂದೆ ಪಡೆದ ಸಾಲದ ಯಾವುದೇ ಹಣದ ಮರುಸಂದಾಯಕ್ಕೆ ನಿಗದಿಪಡಿಸಲಾಗಿದ್ದ ಅವಧಿಯನ್ನು ಲೆಕ್ಕಕ್ಕೆ ತೆಗೆದುಕೊಂಡಾಗ, ಆ ಅವಧಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಮೂಲಕ ಅಥವಾ ಅದರ ಮೇರೆಗೆ ಸಾಲದ ಮರುಸಂದಾಯಕ್ಕೆ ನಿಗದಿಪಡಿಸಲಾದ ಗರಿಷ್ಠ ಅವಧಿಯನ್ನು ಮೀರುವುದಾದರೆ, ಅದರ ಮೇರೆಗೆ ಸಾಲ

ಪಡೆದ ಯಾವುದೇ ಹಣದ ಮರುಸಂದಾಯಕ್ಕೆ ಅವಧಿಯನ್ನು ನಿಗದಿಪಡಿಸಲು ಸ್ಥಳೀಯ ಪ್ರಾಧಿಕಾರಕ್ಕೆ ಅಧಿಕಾರ ಕೊಟ್ಟಿದೆಯೆಂದು ಭಾವಿಸತಕ್ಕದ್ದಲ್ಲ:

ಮತ್ತೂ ಪರಂತು, ಸಮುಚಿತ ಸರ್ಕಾರವು ನೀಡಿದ ಸಾಲಗಳಲ್ಲದ ಇತರ ಸಾಲಗಳ ಸಂದರ್ಭದಲ್ಲಿ ಅಂಥ ಸಾಲದ ನಿಬಂಧನೆಗಳನ್ನು ಹೊರಡಿಸಿದ ದಿನಾಂಕವೂ ಸೇರಿದಂತೆ, ಸಮುಚಿತ ಸರ್ಕಾರವು ಅನುಮೋದಿಸಿದ ಹೊರತು ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಮೀರಿದ ಯಾವುದೇ ಮೊಬಲಗನ್ನು ಸಾಲ ಪಡೆಯತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿರುವುದಾವುದೂ,–

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಅದರ ನಿಧಿಗಳನ್ನು ಅಧಿಕೃತವಲ್ಲದ ಯಾವುದೇ ಉದ್ದೇಶಕ್ಕಾಗಿ ವಿನಿಯೋಗಿಸುವ ಸಲುವಾಗಿ ಸಾಲ ಪಡೆಯಲು ಅಥವಾ ಖರ್ಚು ಮಾಡಲು; ಅಥವಾ

(ಬಿ) ಹನ್ನೆರಡು ತಿಂಗಳುಗಳಿಗೆ ಮೀರದ ಯಾವುದೇ ಅವಧಿಯೊಳಗೆ ಸಂದಾಯವಾಗಬೇಕಾದ ಬಿಲ್ಲುಗಳು ಅಥವಾ ಪ್ರಾಮಿಸರಿ ನೋಟುಗಳನ್ನು ಹೊರಡಿಸುವ ಮೂಲಕ ಹಣವನ್ನು ಸಾಲ ಪಡೆಯಲು ಯಾವುದೇ ಸ್ಥಳೀಯ ಪ್ರಾಧಿಕಾರವನ್ನು ಅಧಿಕೃತಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

**4. ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರ.–** (1) ಸಮುಚಿತ ಸರ್ಕಾರವು, ಈ ಅಧಿನಿಯಮಕ್ಕೆ ಸುಸಂಗತವಾಗಿರುವಂತೆ ನಿಯಮಗಳನ್ನು ಕೆಳಕಂಡವುಗಳ ಬಗ್ಗೆ ರಚಿಸಬಹುದು,–

(i) ಹಣ ಸಾಲ ಪಡೆಯಲು ಭದ್ರತೆಯಾಗಿ ನೀಡಬಹುದಾದ ನಿಧಿಗಳ ಸ್ವರೂಪ;

(ii) ಯಾವ ಕಾಮಗಾರಿಗಳಿಗಾಗಿ ಹಣ ಸಾಲ ಪಡೆಯಬಹುದೋ ಆ ಕಾಮಗಾರಿಗಳು;

(iii) ಹಣ ಸಾಲ ಪಡೆಯಲು ಅನುಮತಿ ಪಡೆಯುವುದಕ್ಕಾಗಿ ಅರ್ಜಿಗಳನ್ನು ಸಲ್ಲಿಸಬೇಕಾದ ರೀತಿ;

(iv) ಅಂಥ ಸಾಲಗಳ ಸಂಬಂಧದಲ್ಲಿ ಮಾಡಬೇಕಾದ ವಿಚಾರಣೆಗಳು ಮತ್ತು ಅಂಥ ವಿಚಾರಣೆಯನ್ನು ನಡೆಸುವ ರೀತಿ;

(v) ಯಾವ ಪ್ರಕರಣಗಳಲ್ಲಿ ಮತ್ತು ನಮೂನೆಗಳಲ್ಲಿ ಅರ್ಜಿಗಳ ಮತ್ತು ವ್ಯವಹರಣೆಗಳ ವಿವರಗಳನ್ನು ಮತ್ತು ಅವುಗಳ ಮೇಲಣ ಆದೇಶಗಳನ್ನು ಪ್ರಕಟಿಸಬೇಕೆಂಬುದು;

(vi) ಸಮುಚಿತ ಸರ್ಕಾರವು ಸಾಲಗಳನ್ನು ನೀಡಬಹುದಾದ ಸಂದರ್ಭಗಳು:

(vii) ಸಮುಚಿತ ಸರ್ಕಾರವನ್ನು ಬಿಟ್ಟು ಇತರ ವ್ಯಕ್ತಿಗಳಿಂದ ಸ್ಥಳೀಯ ಪ್ರಾಧಿಕಾರಗಳು ಸಾಲ ತೆಗೆದುಕೊಳ್ಳಬಹುದಾದ ಸಂದರ್ಭಗಳು;

(viii) ಹಣ ಸಾಲ ಪಡೆಯಲು ಇರುವ ಷರತ್ತುಗಳನ್ನು ದಾಖಲು ಮಾಡುವ ಮತ್ತು ಜಾರಿ ಮಾಡುವ ರೀತಿ;

(ix) ಸಾಲ ನೀಡುವ ಅಥವಾ ಎತ್ತುವ ರೀತಿ ಮತ್ತು ಕಾಲ;

(x) ಸಾಲಗಳ ಮೂಲಕ ಕಾರ್ಯಗತಗೊಳಿಸಿದ ಯಾವುದೇ ಕಾಮಗಾರಿಗಳ ಪರಿಶೀಲನೆ;

(xi) ಸಾಲವನ್ನು ಮರುಸಂದಾಯ ಮಾಡತಕ್ಕ ಕಂತುಗಳೇನಾದರೂ ಇದ್ದಲ್ಲಿ, ಆ ಕಂತುಗಳು, ಸಾಲದ ಮೇಲೆ ವಿಧಿಸಲಾಗುವ ಬಡ್ಡಿ, ಸಾಲಗಳನ್ನು ಮರುಸಂದಾಯ ಮಾಡುವ ಮತ್ತು ಅವುಗಳ ಮೇಲಿನ ಬಡ್ಡಿಯನ್ನು ಸಂದಾಯ ಮಾಡುವ ರೀತಿ ಮತ್ತು ಕಾಲ;

(xii) ಸಾಲಕ್ಕೆ ಭದ್ರತೆಯಾಗುವ ನಿಧಿಗಳ ಮೇಲೆ, ಸಾಲ ಮಾಡಲು ತಗುಲಿದ ಖರ್ಚುಗಳಿಗಾಗಿ ವಿಧಿಸಲಾಗುವ ಮೊತ್ತ;

(xiii) ಅಂಥ ನಿಧಿಗಳ ಜಪ್ತಿ ಮತ್ತು ಅವುಗಳ ವಿಲೆ ಅಥವಾ ವಸೂಲಿ ರೀತಿ;

(xiv) ಸಾಲಗಳ ಬಗ್ಗೆ ಇಡಬೇಕಾದ ಲೆಕ್ಕ ಪತ್ರಗಳು;

(xv) ಸ್ಥಳೀಯ ಪ್ರಾಧಿಕಾರದ ಸಾಲವನ್ನು ಯಾವುದೇ ರೀತಿಯಲ್ಲಿ ಕಡಿಮೆ ಮಾಡುವಲ್ಲಿ ಅಥವಾ ಕಾನೂನುಸಮ್ಮತವಾಗಿ ಆ ಪ್ರಾಧಿಕಾರವು ಕಾರ್ಯಗತಗೊಳಿಸಲು ಅಧಿಕೃತವಾದ ಯಾವುದೇ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ಸಾಲಗಳ ಖರ್ಚಾಗದೆ ಇರುವ ಶಿಲ್ಕುಗಳ ಉಪಯೋಗ ಮತ್ತು ಅಂಥ ಉಪಯೋಗಕ್ಕೆ ಅವಶ್ಯವಾದ ಮಂಜೂರಾತಿ;

ಮತ್ತು ಈ ಅಧಿನಿಯಮವನ್ನು ಕಾರ್ಯಗತಗೊಳಿಸುವುದಕ್ಕೆ ಪ್ರಾಸಂಗಿಕವಾದ ಎಲ್ಲ ಇತರ ವಿಷಯಗಳು.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಎಲ್ಲ ನಿಯಮಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು; ಮತ್ತು ಅಂಥ ಪ್ರಕಟನೆಯ ನಂತರ, ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ ಹಾಗೇ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**5. ಸಾಲವನ್ನು ಮರುಸಂದಾಯ ಮಾಡದಿದ್ದಲ್ಲಿ ಜಪ್ತಿಯ ಮೂಲಕ ಕ್ರಮೋಪಾಯ.–** ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಸಾಲವಾಗಿ ಪಡೆಯಲಾದ ಯಾವುದೇ ಹಣವನ್ನು ಅಥವಾ ಅದರ ಬಗ್ಗೆ ಬಾಕಿ ಇರುವ ಯಾವುದೇ ಬಡ್ಡಿಯನ್ನು ಅಥವಾ ವೆಚ್ಚಗಳನ್ನು ಸಾಲದ ಷರತ್ತುಗಳಿಗನುಸಾರವಾಗಿ ಸಂದಾಯ ಮಾಡಿರದಿದ್ದರೆ, ಸಮುಚಿತ ಸರ್ಕಾರವೇ ಸಾಲ ಕೊಡುವವನಾಗಿದ್ದಲ್ಲಿ ಸಾಲ ಕೊಡುವವನ ಅರ್ಜಿಯ ಮೇಲೆ, ಯಾವ ನಿಧಿಗಳ ಭದ್ರತೆಯ ಮೇಲೆ ಸಾಲವನ್ನು ನೀಡಲಾಗಿತ್ತೋ, ಆ ನಿಧಿಗಳನ್ನು ಜಪ್ತಿ ಮಾಡಬಹುದು ಅಥವಾ ಸಮುಚಿತ ಸರ್ಕಾರವೇ ಸಾಲ ಕೊಡುವವನಾಗಿರದಿದ್ದಲ್ಲಿ, ಆ ನಿಧಿಗಳನ್ನು ಜಪ್ತಿ ಮಾಡತಕ್ಕದ್ದು. ಅಂಥ ಜಪ್ತಿಯ ನಂತರ ಸಮುಚಿತ ಸರ್ಕಾರದಿಂದ ಈ ಸಂಬಂಧಲ್ಲಿ ನೇಮಕಗೊಂಡ ಅಧಿಕಾರಿಯ ಹೊರತು ಯಾರೇ ವ್ಯಕ್ತಿಯು ಜಪ್ತಿ ಮಾಡಲಾದ ನಿಧಿಗಳೊಡನೆ ಯಾವುದೇ ರೀತಿಯಲ್ಲಿ ವ್ಯವಹರಿಸತಕ್ಕದ್ದಲ್ಲ, ಆದರೆ ಅಂಥ ಅಧಿಕಾರಿಯು, ಆ ಬಗ್ಗೆ ಅಂಥ ಜಪ್ತಿಯಾಗಿರದಿದ್ದರೆ ಸಾಲ ಪಡೆದವರು ಮಾಡಬಹುದಾಗಿದ್ದ ಎಲ್ಲ ಕಾರ್ಯಗಳನ್ನು

ಮಾಡಬಹುದು ಮತ್ತು ಉತ್ಪತ್ತಿಗಳನ್ನು ಮತ್ತು ಅದರ ಬಗ್ಗೆ ಬಾಕಿ ಇರುವ ಎಲ್ಲ ಬಡ್ಡಿಗಳು ಮತ್ತು ಖರ್ಚುಗಳನ್ನು ಮತ್ತು ಜಪ್ತಿಯಿಂದ ಮತ್ತು ತರುವಾಯದ ವ್ಯವಹರಣೆಗಳಿಂದ ಉಂಟಾದ ಎಲ್ಲ ವೆಚ್ಚಗಳನ್ನೂ ತೀರಿಸುವುದಕ್ಕಾಗಿ ವಿನಿಯೋಗಿಸಬಹುದು.

**ಕಾನೂನುಸಮ್ಮತವಾಗಿ ಮಾಡಲಾದ ಹಿಂದಿನ ಪ್ರಭಾರಗಳನ್ನು ಜಪ್ತಿಯು ವಿಫಲಗೊಳಿಸತಕ್ಕದ್ದಲ್ಲ.–** ಪರಂತು, ಅಂಥ ಯಾವುದೇ ಜಪ್ತಿಯು ಕಾನೂನಿಗನುಸಾರವಾಗಿ ಈ ಮುಂಚೆ ಯಾವ ಸಾಲಕ್ಕಾಗಿ ಜಪ್ತಿಯಾದ ನಿಧಿಗಳನ್ನು ಒತ್ತೆಯಿಡಲಾಗಿತ್ತೋ ಆ ಯಾವುದೇ ಸಾಲವನ್ನು ವಿಫಲಗೊಳಿಸತಕ್ಕದ್ದಲ್ಲ ಅಥವಾ ಅದಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ; ಯಾವ ಹೊಣೆಗಾರಿಕೆಯ ಬಗ್ಗೆ ಅಂಥ ಜಪ್ತಿಯನ್ನು ಮಾಡಲಾಗಿದೆಯೋ ಅದನ್ನು ವಿನಿಯೋಗಿಸುವುದಕ್ಕೆ ಮುಂಚೆ ಅಂಥ ಎಲ್ಲ ಮುಂಚಿನ ಪ್ರಭಾರಗಳನ್ನು ಉಂಟುಮಾಡತಕ್ಕದ್ದಲ್ಲ. ಆದರೆ ತೀರಿಕೆಗಾಗಿ ಉತ್ಪತ್ತಿಗಳ ಯಾವುದೇ ಭಾಗ ನಿಧಿಗಳ ಉತ್ಪತ್ತಿಗಳಿಂದ ಸಂದಾಯ ಮಾಡತಕ್ಕದ್ದು.

**6. ಅಲ್ಪಾವಧಿಯ ಬಿಲ್ಲುಗಳನ್ನು ಹೊರಡಿಸುವುದು.–** (1) ಭಾರತ ಪೇಪರ್ ಕರೆನ್ಸಿ ಅಧಿನಿಯಮ, 1910 (1910ರ 2)ರ 26ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು 1ನೇ ಅನುಸೂಚಿಯಲ್ಲಿ ನಮೂದಿಸಲಾದ ಯಾವುದೇ ಇತರ ಸ್ಥಳೀಯ ಪ್ರಾಧಿಕಾರಗಳು ಮತ್ತು ಸಮುಚಿತ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರಕರಣದ ಉಪಬಂಧಗಳನ್ನು ವಿಸ್ತರಿಸಬಹುದಾದ ಇತರ ಯಾವುದೇ ಸ್ಥಳೀಯ ಪ್ರಾಧಿಕಾರವು ಸಮುಚಿತ ಸರ್ಕಾರದ ಪೂರ್ವ ಮಂಜೂರಾತಿಯಿಂದ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಳೀಯ ಪ್ರಾಧಿಕಾರವು ಕಾನೂನುಬದ್ಧವಾಗಿ ಹಣವನ್ನು ಸಾಲ ಪಡೆಯಬಹುದಾದ ಯಾವುದೇ ಉದ್ದೇಶಕ್ಕಾಗಿ ಹನ್ನೆರಡು ತಿಂಗಳುಗಳಿಗೆ ಮೀರದಂತೆ ಯಾವುದೇ ಅವಧಿಯಲ್ಲಿ ಸಂದಾಯ ಮಾಡಬಹುದಾದ ಬಿಲ್ಲುಗಳನ್ನು ಅಥವಾ ಪ್ರಾಮಿಸರಿ ನೋಟುಗಳನ್ನು ಹೊರಡಿಸುವ ಮೂಲಕ ಹಣವನ್ನು ಸಾಲ ಪಡೆಯಬಹುದು:

ಪರಂತು, ಹಾಗೆ ಹೊರಡಿಸಬಹುದಾದ ಬಿಲ್ಲುಗಳ ಅಥವಾ ಪ್ರಾಮಿಸರಿ ನೋಟುಗಳ ಮೊಬಲಗು ಅಂಥ ಸ್ಥಳೀಯ ಪ್ರಾಧಿಕಾರವು ತತ್ಕಾಲದಲ್ಲಿ ಸಾಲವಾಗಿ ಪಡೆದಿರುವ ಇತರ ಹಣಗಳನ್ನು ಲೆಕ್ಕಕ್ಕೆ ತೆಗೆದುಕೊಂಡಾಗ, ಯಾವ ಒಟ್ಟು ಮೊಬಲಗನ್ನು ಸಾಲ ಪಡೆಯಲು ಅಂಥ ಪ್ರಾಧಿಕಾರವು ಕಾನೂನು ಮೂಲಕ ಅಧಿಕಾರ ಹೊಂದಿರುವುದೋ ಆ ಒಟ್ಟು ಮೊಬಲಗನ್ನು ಮೀರತಕ್ಕದ್ದಲ್ಲ.

(2) ಸಮುಚಿತ ಸರ್ಕಾರವು, ಈ ಪ್ರಕರಣದ ಮೇರಗೆ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಹಣವನ್ನು ಸಾಲವಾಗಿ ಪಡೆಯಬಹುದಾದ ಅಥವಾ ಮರುಸಂದಾಯದ ಷರತ್ತುಗಳನ್ನು ವಿನಿಯಮಿಸಬಹುದು.

**7. ಈ ಅಧಿನಿಯಮದ ಮೇರೆಗೆ ಹೊರತು ಸಾಲಗಳನ್ನು ಮಾಡತಕ್ಕದ್ದಲ್ಲ.–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಉಪಬಂಧಿಸಲಾದಂತೆ ಹೊರತು, ಯಾವುದೇ ಸ್ಥಳೀಯ ಪ್ರಾಧಿಕಾರವೂ ಯಾವುದೇ ಉದ್ದೇಶಕ್ಕಾಗಿ ತನ್ನ ನಿಧಿಗಳ ಮೇಲೆ ಹಣವನ್ನು ಸಾಲ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಅನ್ಯಥಾ ಪ್ರಭಾರಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮವನ್ನು ಅಂಗೀಕರಿಸಿದ ನಂತರ ಆ ಉದ್ದೇಶಕ್ಕಾಗಿ ಅನ್ಯಥಾ ಮಾಡಿಕೊಂಡ ಯಾವುದೇ ಕರಾರು ಶೂನ್ಯವಾಗತಕ್ಕದ್ದು:

ಪರಂತು, ಇಲ್ಲಿ ಒಳಗೊಂಡಿರುವುದಾವುದೂ,–

(ಎ) ಯಾವುದೇ ಸ್ಥಳೀಯ ಪ್ರಾಧಿಕಾರವನ್ನು, ಈಗ ಅಥವಾ ಇನ್ನು ಮುಂದೆ ಜಾರಿಯಲ್ಲಿರುವ ಯಾವುದೇ ವಿಶೇಷ ಅಧಿನಿಯಮಿತಿಯಿಂದ ಅದಕ್ಕೆ ಪ್ರದತ್ತವಾದ ಸಾಲ ಪಡೆಯುವ ಅಧಿಕಾರಗಳನ್ನು ಚಲಾಯಿಸುವುದನ್ನು ಪ್ರತಿವಾರಿಸುವುದೆಂದು; ಅಥವಾ

(ಬಿ) ಯಾವುದೇ ಸ್ಥಳೀಯ ಪ್ರಾಧಿಕಾರದ ನಿಧಿಗಳನ್ನು ಕಾನೂನುಸಮ್ಮತವಾಗಿ ವಿನಿಯೋಗಿಸಬಹುದಾದ ಯಾವುದೇ ಉದ್ದೇಶಕ್ಕಾಗಿ ವಿನಿಯೋಗಿಸಲಿರುವ ಹಣದ ಮೇಲಿನ ಬಡ್ಡಿಯ ಸಂದಾಯಕ್ಕೆ ಖಾತರಿ ಕೊಡುವ ಮೂಲಕ ಅದರ ನಿಧಿಗಳ ಮೇಲೆ ಪ್ರಭಾರ ವಿಧಿಸಲು ಅಂಥ ಯಾವುದೇ ಅಧಿನಿಯಮಿತಿಯ ಮೂಲಕ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಪ್ರದತ್ತವಾದ ಅಧಿಕಾರಕ್ಕೆ ಬಾಧಕವುಂಟು ಮಾಡುವುದೆಂದು

– ಭಾವಿಸತಕ್ಕದ್ದಲ್ಲ.

**8. 5ನೇ ಸೆಪ್ಟೆಂಬರ್, 1871ಕ್ಕೆ ಮುಂಚೆ ಅಸ್ತಿತ್ವದಲ್ಲಿದ್ದ ಸಾಲಗಳಿಗೆ ಅಧಿನಿಯಮದ ಅನ್ವಯ.–** 5ನೇ ಪ್ರಕರಣದಲ್ಲಿ ನಮೂದಿಸಲಾದ ಕ್ರಮೋಪಾಯವು ಹದಿನೆಂಟು ನೂರಾ ಎಪ್ಪತ್ತೊಂದರ ಸೆಪ್ಟೆಂಬರ್ ಐದನೇ ದಿನಾಂಕಕ್ಕೆ ಮುಂಚೆ ಸಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್'ನು ಸಾಲವಾಗಿ ನೀಡಿದ ಯಾವುದೇ ಹಣದ ಮತ್ತು ಅಂಥ ಹಣದ ಮೇಲೆ ಬಾಕಿಯಿರುವ ಬಡ್ಡಿಯ ವಸೂಲಿಗೆ ದೊರೆಯತಕ್ಕದ್ದು.

**9.** [ನಿರಸನಗೊಳಿಸುವ ಅಧಿನಿಯಮ, 1927 (1927 ರ 12) ರ 2ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.]

## ಅನುಸೂಚಿ I

(6ನೇ ಪ್ರಕರಣವನ್ನು ನೋಡಿ)

ಕಲ್ಕತ್ತ ಕಾರ್ಪೋರೇಷನ್

ಕಲ್ಕತ್ತ ಬಂದರಿನ ಕಮಿಷನರುಗಳು

ಬಾಂಬೆ ನಗರದ ಮುನಿಸಿಪಲ್ ಕಾರ್ಪೋರೇಷನ್

ಬಾಂಬೆ ಬಂದರಿನ ಟ್ರಸ್ಟಿಗಳು

ಮದ್ರಾಸು ಕಾರ್ಪೋರೇಷನ್

ಮದ್ರಾಸು ಬಂದರಿನ ಟ್ರಸ್ಟಿಗಳು

ಬಾಂಬೆ ನಗರದ ಮೇಲ್ಪಾಟಿಗಾಗಿ ಟ್ರಸ್ಟಿಗಳು

ಕಲ್ಕತ್ತ ನಗರದ ಮೇಲ್ಪಾಟಿಗಾಗಿ ಟ್ರಸ್ಟಿಗಳು

## ಅನುಸೂಚಿ II

ನಿರಸನಗೊಳಿಸಲಾದ ಅಧಿನಿಯಮಿತಿಗಳು – [ನಿರಸನಗೊಳಿಸುವ ಅಧಿನಿಯಮ, 1927 (1927ರ 12 ರ] 2ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.